<u>ಕೋವಿಡ್-19 ತುರ್ತು</u>

<u>ಕರ್ನಾಟಕ ಸರ್ಕಾರ</u>

ಸಂ.ಕಂಇ/ 71 / ಪ್ರಕಾ/2020

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿ ಕಟ್ಟಡ
ಬೆಂಗಳೂರು, ದಿನಾಂಕ:23.04.2020

# ಆದೇಶ

**ವಿಷಯ:** ಕೋವಿಡ್-19ಗೆ ಸಂಬಂಧಿಸಿದ ಲಾಕ್ ಡೌನ್ ಅವಧಿಯಲ್ಲಿ ಬಿಬಿಎಂಪಿ ವ್ಯಾಪ್ತಿಯ ಕೆಲಸದ ಸ್ಥಳಕ್ಕೆ ಹೋಗಿ ಬರುವ ಸಿಬ್ಬಂದಿಗಳಿಗೆ ಪಾಸ್ ವಿತರಿಸುವ ಬಗ್ಗೆ.

-o-

ರಾಜ್ಯದಲ್ಲಿ COVID -19 ಪರಿಣಾಮಕಾರಿಯಾಗಿ ನಿಯಂತ್ರಿಸಲು ಈಗಾಗಲೇ ಕೇಂದ್ರೀಯ ಗೃಹ ಮಂತ್ರಾಲಯದ ಆದೇಶಗಳನುಸಾರ ಕರ್ನಾಟಕ ರಾಜ್ಯ ಸರ್ಕಾರವು ಕ್ರೋಢೀಕೃತ ಹಾಗೂ ಪರಿಷ್ಕೃತ ಮಾರ್ಗಸೂಚಿಗಳನ್ನು ಆದೇಶ ಸಂ.ಕಂಇ 158 ಟಿಎನ್ಆರ್ 2020, ದಿ. 22.04.2020 ರಂದು ಹೊರಡಿಸಿದೆ. ಸದರಿ ಆದೇಶವು ದಿ.23.04.2020ರಿಂದ ಜಾರಿಯಲ್ಲಿರುತ್ತದೆ.

ಸದರಿ ಮಾರ್ಗಸೂಚಿಗಳಲ್ಲಿ ಲಾಕ್ ಡೌನ್‌ಯಿಂದ ಕೆಲವೊಂದು ಚಟುವಟಿಕೆಗಳಿಗೆ ವಿನಾಯಿತಿ ನೀಡಲಾಗಿದೆ. ಅದರಂತೆ ವಿನಾಯಿತಿ ನೀಡಿದ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ಮಾರ್ಗಸೂಚಿಯ ಕ್ರಮ ಸಂ.17 (ii)ರಲ್ಲಿ ಪಾಸ್‌ಗಳೊಂದಿಗೆ ಕೆಲಸದ ಸ್ಥಳಕ್ಕೆ ಹೋಗಿ ಬರಲು ಸಿಬ್ಬಂದಿಗಳಿಗೆ ಅನುಮತಿ ನೀಡಲಾಗಿದೆ. ಪಾಸ್‌ಗಳನ್ನು ನೀಡುವ ಸಲುವಾಗಿ ಸಂಬಂಧಪಟ್ಟ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿ/ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿಗಳು ಕನಿಷ್ಠ ಸಂಖ್ಯೆಗೆ ನೀಡುವ ಶಿಫಾರಸ್ಸಿನ ರೀತ್ಯಾ ಪೋಲಿಸ್ ಇಲಾಖೆಯು ಬಿಬಿಎಂಪಿ ವ್ಯಾಪ್ತಿಗೆ ಸಂಬಂಧಿಸಿದಂತೆ ಪಾಸ್ ವಿತರಣೆ ಮಾಡಲು ಕ್ರಮಕೈಗೊಳ್ಳುವಂತೆ ಆದೇಶಿಸಿದೆ.

(ಟಿ.ಎಂ.ವಿಜಯ್ ಭಾಸ್ಕರ್) 23/4<br>
ಮುಖ್ಯ ಕಾರ್ಯದರ್ಶಿ ಹಾಗೂ<br>
ಕರ್ನಾಟಕ ರಾಜ್ಯ ವಿಪತ್ತು ನಿರ್ವಹಣಾ ಪ್ರಾಧಿಕಾರದ<br>
ಕಾರ್ಯಕಾರಿ ಸಮಿತಿ ಅಧ್ಯಕ್ಷರು

ಎಲ್ಲಾ ಅಪರ ಮುಖ್ಯ ಕಾರ್ಯದರ್ಶಿ/ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿಗಳು.